ದಿನಾಂಕಃ 18.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದ:**

ಪ್ರತಿವಾದಿಯವರು ನನಗೆ ಚಿಕ್ಕ ವಯಸ್ಸಿನಿಂದ ಪರಿಚಯವಿರುತ್ತಾರೆ. ಪ್ರಸ್ತುತ ದಾವೆಯಲ್ಲಿ ಸಾಕ್ಷಿ ನುಡಿಯುವಂತೆ ಪ್ರತಿವಾದಿಯವರು ಯಾವ ದಿನ ತಿಳಿಸಿರುತ್ತಾರೆ ಎಂದು ನೆನಪಾಗುತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ರಾಜು, ಹೊಸಹಳ್ಳಿ ಗ್ರಾಮದ ವಾಸಿ ತಯಾರಿಸಿರುತ್ತಾರೆ. ಅದನ್ನು ಕಳೆದ 1 ವರ್ಷದ ಹಿಂದೆ ತಯಾರಿಸಲಾಗಿದೆ. ಸದರಿ ಪ್ರಮಾಣ ಪತ್ರವು ಕನ್ನಡ ಭಾಷೆಯಲ್ಲಿ ಇರುತ್ತದೆ. ಒಂದು ವೇಳೆ ಸಾಕ್ಷಿ ಪ್ರಮಾಣ ಪತ್ರವು ಆಂಗ್ಲ ಭಾಷೆಯಲ್ಲಿ ಬರವಣಿಗೆಯಾಗಿದ್ದಲ್ಲಿ ನನಗೆ ಸಂಬಂಧಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಪುನಃ ಬರೆಯಲಾಗಿತ್ತು ನನಗೆ ಓದಿ ತಿಳಿಸಿದ ನಂತರ ನಾನು ಅರ್ಥ ಮಾಡಿಕೊಂಡಿರುತ್ತೇನೆ. ನಾನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರವಣಿಗೆಯಾಗಿದ್ದ 2 ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ.22.02.2016 ರಂದು ಪಂಚಾಯ್ತಿಯಲ್ಲಿ ಒಂದು ಬರವಣಿಗೆಯಾಗಿದ್ದ ಬಗ್ಗೆ ನನಗೆ ನೆನಪಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯವರ ಮಧ್ಯೆ ಇರುವ ವ್ಯಾಜ್ಯದ ಕುರಿತು ಅಂದಾಜು 2 ರಿಂದ 3 ಪಂಚಾಯ್ತಿಯಾಗಿರುತ್ತದೆ. ಸದರಿ ಪಂಚಾಯ್ತಿಯು ಯಾವ ವರ್ಷ ಮತ್ತು ಯಾವ ದಿನಾಂಕದಂದು ನಡೆದಿರುತ್ತದೆ ಎಂದು ನನಗೆ ನೆನಪಾಗುತ್ತಿಲ್ಲ. ಸದರಿ ಪಂಚಾಯ್ತಿಯಲ್ಲಿ ಎಷ್ಟು ಪಂಚಾಯ್ತಿಯ ತೀರ್ಮಾನ ಬರವಣಿಗೆಯಾಗಿರುತ್ತದೆ ಎಂದು ಹೇಳಲು ಸಾದ್ಯವಿಲ್ಲ.

ದಿ.22.02.2016 ರಂದು ಆದ ಪಂಚಾಯ್ತಿಯಲ್ಲಿ ಪ್ರತಿವಾದಿಯವರು ವಾದಿಯವರಿಗೆ ರೂ.1,00,000/- ಹಣವನ್ನು ಕೊಡಬೇಕು ಎಂದು ಬರವಣಿಗೆ ಯಾಗಿತ್ತು ಎಂದರೆ ಸಾಕ್ಷಿಯು ಸದರಿ ಪಂಚಾಯ್ತಿಯ ಪ್ರಕಾರ ಮನೆಯ ಬಾಬ್ತು ರೂ.75,000/- ಕೊಡಬೇಕು ಎಂದು ತೀರ್ಮಾನವಾಗಿರುತ್ತದೆ ಸದರಿ ಹಣವನ್ನು ವಾದಿಯು ನೀಡಿದ ನಂತರ ನಾನು ಪ್ರತಿವಾದಿಯವರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚಾಯ್ತಿಯ ತೀರ್ಮಾನ ಬರವಣಿಗೆಯಾದ ದಾಖಲಾತಿಗಳನ್ನು ಯಾರಿಗೆ ವಹಿಸಲಾಗಿರುತ್ತದೆ ಎಂದು ನನಗೆ ನೆನಪಾಗುತ್ತಿಲ್ಲ. ಮಾವಿನಗೋಡು ತೋಟದ ಸ.ನಂ.503 ಎಂಬುದರ ಬಗ್ಗೆ ನನಗೆ ನೆನಪಾಗುತ್ತಿಲ್ಲ. ವಾದಿ ಮತ್ತು ಪ್ರತಿವಾದಿಯವರ ತಂದೆಗೆ ಸೇರಿದ ಒಂದು ಹಳೆಯ ಹಂಚಿನ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯ ಪಕ್ಕದಲ್ಲಿಯೇ ಪ್ರತಿವಾದಿಯವರು ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿರುತ್ತಾರೆ ಎಂದರೆ ಸರಿ. ನಾನು ರೂ.75,000/- ಹಣವನ್ನು ನೀಡಿರುವ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಪಂಚಾಯ್ತಿ ಬರವಣಿಗೆ ಆಗುವ ಪೂರ್ವದಲ್ಲಿಯೇ ಸರ್ವೇಯನ್ನು ಮಾಡಿಸಲಾಗಿತ್ತು. ಸದರಿ ವಿಷಯವನ್ನು ಪಂಚಾಯ್ತಿಯ ಬರವಣಿಗೆಯಲ್ಲಿ ನಮೂದಿಸಲಾಗಿರುತ್ತದೆ. ಪಂಚಾಯ್ತಿಯ ಬರವಣಿಗೆಯು ಎಷ್ಟು ಪುಟದಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ.

ಸಾಕ್ಷಿಯು ನಿಡಿ-2 ನ್ನು ನೋಡಿ ಪಂಚಾಯ್ತಿ ಬರವಣಿಗೆಯ ಮೊದಲನೇ ಪುಟ ಎಂದು ಗುರುತಿಸಿರುತ್ತಾರೆ. ಸದರಿ ಬರವಣಿಗೆಯನ್ನು ಯಾರು ಮಾಡಿರುತ್ತಾರೆ ಎಂದು ನೆನಪಾಗುತ್ತಿಲ್ಲ. ನಿಡಿ-

2 ರ ಕೊನೆಯ ಪುಟದಲ್ಲಿ 1 ನೇ ಪುಟದಿಂದ ಮುಂದುವರೆದಂತೆ ಬರೆಯಲಾಗಿರುತ್ತದೆ ಎಂದು ನಮೂದಿಸಾಲಗಿರುತ್ತದೆ ಎಂದರೆ ಸರಿ. ನಿಡಿ-2 ರ ಕೊನೆಯ ಪುಟದ ಅಂಶಗಳನ್ನು ಪುನಃ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಕೇವಲ ಸಹಿಗಳನ್ನು ಪಡೆದು ಯಾವುದೇ ಪಂಚಾಯ್ತಿಯನ್ನು ಮಾಡದೇ ಇದ್ದರು ಪಂಚಾಯ್ತಿಯಾಗಿರುವ ಕುರಿತು ಬರವಣಿಗೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-2 ರ ದಾಖಲಾತಿಯಲ್ಲಿ ಯಾವುದೇ ಪುಟ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಪಂಚಾಯ್ತಿಯಾಗದಿದ್ದರೂ ಮತ್ತು ವಾದಿಯು ಪ್ರತಿವಾದಿಯವರಿಗೆ ರೂ.75,0000/- ಹಣವನ್ನು ಮನೆಯ ಬಾಬ್ತು ಕೊಡಬೇಕು ಎಂದು ತೀರ್ಮಾನ ಮಾಡಲಾಗಿತ್ತು ಎಂದು, ಅದೇ ರೀತಿ ಸದರಿ ಹಣವನ್ನು ವಾದಿಯು ನೀಡಿದ ನಂತರ ಪ್ರತಿವಾದಿಯವರಿಗೆ ನಾನು ಹಸ್ತಾಂತರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನಗೆ ಆತ್ಮೀಯ ಸಂಬಂಧಿಯಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.